**Andolan**

**Date:** March 26, 2016 **Page No.** 9

**Edition:** Mysuru **Language: Kannada**

# ಪದವಿ ಪುರಸ್ಕಾರಕ್ಕೆ ಗೌರವ ತನ್ನಿ

## ಎಸ್‌ಡಿಎಂಐಎಂಡಿ ಕಾಲೇಜಿನ ಸ್ನಾತಕೋತ್ತರ ಡಿಪ್ಲೊಮಾ ವಿದ್ಯಾರ್ಥಿಗಳ ಪ್ರಮಾಣ ಪತ್ರ ವಿತರಣಾ ಸಮಾರಂಭದಲ್ಲಿ ವೀರೇಂದ್ರ ಹೆಗ್ಗಡೆ



ಮೈಸೂರು,ಮಾ.೨೫–'ನೀವು ಪಡೆದ ಪದವಿ, ಪುರಸ್ಕಾರಕ್ಕೆ ಗೌರವ ತನ್ನಿ ಎಂದು ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಹೇಳಿದರು.

ನಗರದ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ನಿರ್ವಹಣಾ ಅಭಿವೃದ್ಧಿ ಸಂಸ್ಥೆಯಲ್ಲಿ ಸ್ನಾತಕೋತ್ತರ ಡಿಪ್ಲೊಮಾ ಪಡೆದ ೧೩೭ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಣಾ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಭಾರತದ ಆರ್ಥಿಕತೆ ವೇಗ ಪಡೆದುಕೊಳ್ಳುತ್ತಿದೆ. ಈ ಸಂದರ್ಭದಲ್ಲಿ ಇರುವ ಆಶಯ ನಿರೀಕ್ಷೆ ಮತ್ತು ಪ್ರತಿಭೆಗಳ ಕೊರತೆ ನಡುವಿನ ಅಂತರವನ್ನು ತಗ್ಗಿಸಲಿಕ್ಕಾಗಿ ಈ ಸಂಸ್ಥೆಯನ್ನು ೧೯೯೩ ರಲ್ಲಿ ಸ್ಥಾಪಿಸಲಾಯಿತು. ಇಂದು ಈ ಸಂಸ್ಥೆ ವಿಶ್ವ ಮಾನ್ಯತೆಯನ್ನು ಪಡೆದಿದೆ. ವ್ಯವಹಾರದ ಜೊತೆ ನೈತಿಕತೆ ಮತ್ತು ಮೌಲ್ಯವನ್ನು ಬೆಳೆಸಲು ಸಂಸ್ಥೆ ಆದ್ಯತೆ ನೀಡಿದೆ ಎಂದರು.

ವಿದ್ಯಾಲಯದ ೭ ವಿಭಾಗಗಳಲ್ಲಿ ಪಾರಮ್ಯ ತೋರಿದ ವಿದ್ಯಾರ್ಥಿಗಳಿಗೆ ಚಿನ್ನದ ಪದಕ ವಿತರಿಸಿದ ಬೋಸ್ಟನ್ ಕನ್ಸಲ್‌ಟಿಂಗ್ ಗುಂಪಿನ ಮಾಜಿ ಅಧ್ಯಕ್ಷ ಭಾರತದ ಯೋಜನಾ ಆಯೋಗದ ಮಾಜಿ ಸದಸ್ಯರು ಆದ ಅರುಣ್ ಮೈರಾ ಅವರು ಭಾರತಕ್ಕೆ ಈ ಮಕ್ಕಳನ್ನು ನೀಡಿದ ಅವರ ತಂದೆ ತಾಯಿಯನ್ನು ಶ್ಲಾಘಿಸಿದರಲ್ಲದೆ, ಮನುಷ್ಯನಿಗೂ ಪ್ರಾಣಿಗೂ ಇರುವ ವ್ಯತ್ಯಾಸವೆಂದರೆ ಅವನ ಕಲಿಕೆಯ ಸಾಮರ್ಥ್ಯ. ಅದನ್ನು ಉಸಿರಿರುವ ತನಕ ನಿಲ್ಲಿಸಬೇಡಿ ಈ ಜಗತ್ತಿನ ಇನ್ನಷ್ಟು ಸುಧಾರಣೆಗೆ ಪ್ರಯತ್ನಿಸಿ ಎಂದು ಅವರು ಹೇಳಿದರು.

ತಾನು ನೀಡಿದ ೭ ಚಿನ್ನದ ಪದಕಗಳಲ್ಲಿ ೫ಅನ್ನು ವಿದ್ಯಾರ್ಥಿನಿಯರೇ ಪಡೆದಿದ್ದಾರೆ. ಇದು ಭಾರತದಂತಹ ದೇಶದಲ್ಲಿ ಉತ್ತಮ ಲಕ್ಷಣ. ಇದು ಸಂಸ್ಥೆಗೂ ಹಿರಿಮೆ ಎಂದರು.

ಈ ಕಾರ್ಯಕ್ರಮದಲ್ಲಿ ಸಂಸ್ಥೆಯ ನಿರ್ದೇಶಕ ಎನ್.ಆರ್. ಪುರುಷೋತ್ತಮ ಸ್ವಾಗತಿಸಿ, ಸಂಸ್ಥೆಯ ವಾರ್ಷಿಕ ವರದಿ ಓದಿದರು, ಮಾಲತಿ ಶ್ರೀರಾಮ ನಿರೂಪಿಸಿ, ಹೆಚ್.ಗಾಯಿತ್ರಿ ವಂದಿಸಿದರು.

ವೇದಿಕೆಯ ಮೇಲೆ ಸಂಸ್ಥೆಯ ನಿರ್ದೇಶಕ ಮಂಡಳಿಯ ಸದಸ್ಯರು ಉಪಸ್ಥಿತರಿದ್ದರು.

### ಚಿನ್ನದ ಪದಕ ಪಡೆದವರು

ಕೀರ್ತಿ ಶುಕ್ಲಾ (ಅಧ್ಯಕ್ಷರ ಆಯ್ಕೆಯ ಪದಕ), ನೀತು ಪ್ರಭಾಕರನ್(ಅಂಕುರ್ ಗುಪ್ತಾ ಒಟ್ಟು ನಿರ್ವಹಣೆ), ಶೀರ್ಘಾ ದ್ರೋಣಾಂರಾಜು (ಅಂಕುರ್ ಗುಪ್ತಾ ಹಣಕಾಸು ನಿರ್ವಹಣೆ), ನೀತು ಪ್ರಭಾಕರನ್ (ಮಾರುಕಟ್ಟೆ ಶಾಸ್ತ್ರ), ಉತ್ತಮ ಅನುರಾಗ್ ಷಾಪೂರ (ಕಾರ್ಯ ನಿರ್ವಹಣೆಯಲ್ಲಿ ಉತ್ತಮ), ಕೀರ್ತಿ ಶುಕ್ಲಾ (ಉತ್ತಮ ಮಾನವ ಸಂಪನ್ಮೂಲ ನಿರ್ವಹಣೆ), ಕೀರ್ತಿ ಶುಕ್ಲಾ (ಕಂಪ್ಯೂಟರ್ ವ್ಯವಸ್ಥೆಯಲ್ಲಿ ಉತ್ತಮ ನಿರ್ವಹಣೆ) ವಿಭಾಗಗಳಲ್ಲಿ ಚಿನ್ನದ ಪದಕ ಪಡೆದರು.